

ಡಾ.ವಿನೋದ ಛೆಬ್ಬಿ

ಪರಸಂಬಂಧದಲ್ಲಿ ತೊಡಗಿದ ಸಂಗಾತಿಯನ್ನು ತೊರೆಯುವುದು ಬೇಡವೋ ಎಂದು ನಿರ್ಧರಿಸುವುದು ಬಹಳ ಕಠಿಣ.

# 153: ಪರಸಂಬಂಧ-16

ಪರಸಂಬಂಧವನ್ನು ಬಿಟ್ಟುಕೊಡದ ಗಂಡನೊಡನೆ ಹೊಂದಾಣಿಕೆ ಮಾಡಿಕೊಳ್ಳುವಂತೆ ಬಹುತೇಕ ಹೆಂಡತಿಯ ಮೇಲೆಯೇ ಒತ್ತಾಯವು ಬರುವುದರಿಂದ ಹೆಂಗಸರಿಗೆ ಸಂಬಂಧವನ್ನು ಕಡಿದುಕೊಳ್ಳುವಂಥ ಸ್ವತಂತ್ರ ನಿರ್ಧಾರವನ್ನು ತೆಗೆದುಕೊಳ್ಳಲು ಇಚ್ಛಾಶಕ್ತಿ ಹುಟ್ಟುವುದಿಲ್ಲ. ಹಾಗಾಗಿ ಬಹುತೇಕ ಹೆಂಗಸರು ತನ್ನ ಗಂಡ ಸುಧಾರಿಸಬಹುದು ಎಂಬ ಪೊಳ್ಳು ಆಸೆಗೆ ನೇತುಬೀಳುತ್ತಾರೆ ಎಂದು ತಿಳಿದುಕೊಂಡೆವು.

ಪರಸಂಬಂಧಗಳು ಸಮಾಜದ ಎಲ್ಲ ಸ್ತರಗಳಲ್ಲಿ ನಡೆಯುತ್ತಿದ್ದರೂ ಅವು ಹೆಚ್ಚಾಗಿ ಬಾಧಿಸುವುದು ಮಧ್ಯಮ ಹಾಗೂ ಕೆಳಮಧ್ಯಮ ಕುಟುಂಬಗಳ ಹೆಂಗಸರನ್ನು. ಅದರಲ್ಲೂ ಹೆಣ್ಣು ಸಾಕಷ್ಟು ಕಲಿತಿರದಿದ್ದರೆ, ಹಾಗೂ ಉದ್ಯೋಗವಿಲ್ಲದೆ ಗಂಡನ 'ಆಶ್ರಯ'ದಲ್ಲಿ ಇದ್ದರೆ ಬಾಧೆ ಇನ್ನೂ ಹೆಚ್ಚು – ಇದಕ್ಕೇ ಕೆಲವರು ಗಂಡಂದಿರು 'ನಿನಗೇನು ಕಡಿಮೆ ಮಾಡಿದ್ದೇನೆ?' ಎಂದು ಪ್ರಶ್ನಿಸುವ ಭಂಡಧೈರ್ಯ ಮಾಡುತ್ತಾರೆ! ಇಂಥವರು ಗಂಡನನ್ನು ಬಿಡಲು ಹೊರಟರೆ ಉಂಟಾಗುವ ಆರ್ಥಿಕ ಅಭದ್ರತೆ, ಅಸುರಕ್ಷಿತತೆ, ಪರಿಚಿತರಿಂದ ತಿರಸ್ಕಾರ, ಒಂಟಿತನ– ಇವುಗಳನ್ನು ಹೇಗೆ ನಿಭಾಯಿಸಬೇಕು ಎನ್ನುವುದು ಗೊತ್ತಿರುವುದಿಲ್ಲ. ಅಷ್ಟೇಕೆ, ಸಾಕಷ್ಟು ಕಲಿತು ಉದ್ಯೋಗದಲ್ಲಿ ಇರುವ ಹೆಂಗಸರು ಗಂಡಸರಂತೆ ಒಂಟಿಯಾಗಿ ತಲೆಯೆತ್ತಿ ಬದುಕಬಹುದು ಎಂದು ತಾಯ್ತಂದೆಯರು ಹೇಳಿಕೊಟ್ಟಿರುವುದಿಲ್ಲ. ದಾಂಪತ್ಯವು ಹೆಣ್ಣಿಗೆ ಅತ್ಯವಶ್ಯಕ ಎಂದೇ ಎಲ್ಲ ಹೆಂಗಸರಿಗೂ ಬಿಂಬಿಸಲಾಗಿರುತ್ತದೆ. (ಒಬ್ಬಳು ಪದವಿ ಮುಗಿದು ಕೆಲಸ ಸಿಕ್ಕ ವರ್ಷದೊಳಗಾಗಿ ಮದುವೆಯಾಗಿ ನನ್ನಲ್ಲಿ ಬಂದಿದ್ದಳು. ಮದುವೆ ಅಷ್ಟು ಬೇಗ ಯಾಕೆಂದು ಕೇಳಿದಾಗ, ಹೆಣ್ಣಾದ ಮೇಲೆ ಮದುವೆ ಮಕ್ಕಳು ಇದೆಲ್ಲ ಬೇಡವೆ ಎಂದು ನನ್ನನ್ನು ಪ್ರಶ್ನಿಸಿದಳು. ಅವಳು ಗಂಡಿನಿಂದ ಶರೀರ ಸುಖವನ್ನು, ಹಾಗೂ ತಾಯ್ತನದ ಜವಾಬ್ದಾರಿಯನ್ನು ಹೊರಲು ಮನಸಾ ಬಯಸುತ್ತಾಳೆಯೇ ಎಂದು ಸ್ಪಷ್ಟೀಕರಣ ಕೇಳಿದಾಗ ಗೊಂದಲದಲ್ಲಿ ಬಿದ್ದಳು. ಆಗ ಅರಿವಾಗಿದ್ದು ಏನೆಂದರೆ, ದಾಂಪತ್ಯವಿಲ್ಲದೆ ಹೆಣ್ಣು ಬಾಳಿಬದುಕಲು ಸಾಧ್ಯವಿಲ್ಲ ಎಂದು ಭಾವಿಸಿದ್ದಳು!) ಇಂಥ ಧೋರಣೆಗಳಿಗೆ ಅಂಟಿರುವ ಹೆಂಗಸರು ಪರಸಂಬಂಧ ಹೊಂದಿರುವ ಗಂಡನಿಂದ ಬೇರ್ಪಡುವ ನಿರ್ಧಾರವನ್ನು ಕೈಗೊಳ್ಳುವುದು ದುಸ್ಸಾಧ್ಯವಾಗಿಬಿಡುತ್ತದೆ.

ಇಲ್ಲೊಂದು ಪ್ರಶ್ನೆ: ಪರಸಂಬಂಧದಲ್ಲಿ ಒಳಗೊಂಡಿರುವ ಸಂಗಾತಿಯು ಸುಧಾರಿಸುವುದು (ಸದ್ಯಕ್ಕಂತೂ) ಅಸಾಧ್ಯ ಎಂದು ನಿರ್ಧರಿಸುವುದು ಯಾವ ಆಧಾರದ ಮೇಲೆ? ಇದಕ್ಕೆ ಸ್ಪಷ್ಟ ನಿರ್ದೇಶನ ಕೊಡುವುದು ಬಹಳ ಕಠಿಣ. ಪರಸಂಬಂಧ ಮಾಡುವವರೆಲ್ಲರೂ ಮನೆಹಾಳರಲ್ಲ, ಅವರೂ ಸುಧಾರಿಸಬಹುದು ಎಂದು ಮುಂಚೆ ಹೇಳಿದ್ದೆ. ಹಾಗೆಯೇ ಕೆಲವರು ಸುಧಾರಿಸುವುದು ದುಸ್ಸಾಧ್ಯ ಎಂದು ಹೇಳಿದ್ದೆ. ಇವರು ಹೀಗೆಯೇ ಎಂದು ನಿಶ್ಚಿತವಾಗಿ ಹೇಳಲು ಆಗದಿದ್ದರೂ ಹೀಗಿರಬಹುದು ಎಂದು ಬೆರಳು ಮಾಡಿ ತೋರಿಸುವ ಅಂಶಗಳು ಕೆಳಗಿನಂತಿವೆ:

**1) ವ್ಯಕ್ತಿತ್ವ ವಿಕಾರ ಹಾಗೂ ಮಾನಸಿಕ ಅಸ್ವಸ್ಥತೆ:** ಇವರ ಬಗೆಗೆ ಹೋದಸಲ ವಿವರಿಸಿದ್ದೇನೆ. ಇವರು ಭಾವನಾತ್ಮಕ ಬಾಂಧವ್ಯವನ್ನು ಬೆಳೆಸಲು ಕಷ್ಟಸಾಧ್ಯ, ಹಾಗೂ ಬದಲಾಗಲು ಒಪ್ಪುವುದಿಲ್ಲ – ದುರಂತಕ್ಕೆ ಒಳಗಾಗಿ ಬದುಕುವ ಆಸೆಯನ್ನು ಕಳೆದುಕೊಂಡು ಖಿನ್ನತೆಯ ಆಳಕ್ಕೆ ಬೀಳದ ಹೊರತು. (ಒಬ್ಬ ತನ್ನ ನಾದಿನಿಯನ್ನು ಪ್ರೇಮಿಸಿ ಹೆಂಡತಿಯನ್ನು ಅಲಕ್ಷಿಸಿ ಎರಡನೆಯ ಮದುವೆಯಾಗಲು ಹೊರಟಿದ್ದ. ಅಷ್ಟರಲ್ಲಿ ಅವನ ಮಗ ತೀರಿಕೊಂಡಾಗ ಹೆಂಡತಿಯೊಡನೆ ದುಃಖದಲ್ಲಿ ಮುಳುಗಿ ಪರಸಂಬಂಧ ಮರೆತುಬಿಟ್ಟ)

**2) ಭರವಸೆ ಕೊಟ್ಟೂ ಸರಿಹೋಗದವರು:** ಕೇಳಿದಾಗಲೆಲ್ಲ 'ಸುಧಾರಿಸುತ್ತೇನೆ' ಎಂದು ಪೊಳ್ಳು ಭರವಸೆ ಕೊಡುತ್ತಲೇ ಹೊರಚಾಳಿಯನ್ನು ಮುಂದುವರಿಸುವವರಿಗೆ ತಮಗೇನು ಬೇಕೆಂಬ ಅರಿವು ಸ್ಪಷ್ಟವಾಗಿ ಇರುವುದಿಲ್ಲ.

**3) ಪರಸಂಬಂಧದ ಮರುಕಳಿಕೆ:** ಒಂದು ಪರಸಂಬಂಧದ ಬಿಸಿ ಆರಿದ ಸ್ವಲ್ಪಕಾಲದ ನಂತರ ಇನ್ನೊಂದಕ್ಕೆ ಕೈಹಾಕುವುದು. ಇಂಥವರಿಗೆ ದ್ವಂದ್ವಭಾವ ಇದ್ದು ತಮ್ಮನ್ನೇ ತಾವು ದ್ವೇಷಿಸುತ್ತಾರೆ.

**4) ಮದ್ಯ ಅಥವಾ ಮಾದಕವಸ್ತುಗಳ ಚಟ:** ವ್ಯಸನದ ಮನಸ್ಸಿನಿಂದ ವಿವೇಚನೆ ದೂರವಾಗುತ್ತದೆ. ಇವರಿಗೆ ಚಟ ಬಿಡಿಸುವ ಚಿಕಿತ್ಸೆ ಕೊಡಿಸುವುದು ಮೊದಲ ಅಗತ್ಯ.

**5) ಸಂಗಾತಿಯ ಜೊತೆಗೆ ದುರ್ನಡತೆ:** ಪರಸಂಬಂಧವನ್ನು ಬಿಟ್ಟ ಬೇಸರವನ್ನು ಸಂಗಾತಿಯ ಮೇಲೆ ಹರಿಹಾಯಿಸುವುದು; ಅವರನ್ನು ಕೀಳಾಗಿ ಕಾಣುತ್ತ ದೈಹಿಕ ಅಥವಾ ಮಾನಸಿಕವಾಗಿ ಹಿಂಸಿಸುವುದು – ಇದರಿಂದ ನೊಂದವರ ಆತ್ಮಗೌರವಕ್ಕೆ ಪೆಟ್ಟು ಬೀಳುತ್ತದೆ.

**6) ಪರಿಚಿತ ಹೆಂಗಸರೊಡನೆ ಅಸಭ್ಯ ನಡವಳಿಕೆ:** ಉದಾ. ಪರಸಂಬಂಧವನ್ನು ಬಿಟ್ಟ ಮೇಲೆ ಹೆಂಡತಿಯ ಬದಲು ಆಕೆಯ ತಂಗಿಗೆ ಹತ್ತಿರವಾಗುತ್ತ ಇಬ್ಬರಿಗೂ ಮುಜುಗರ ತರಿಸುವುದು; ಮನೆಗೆ ಬಂದುಹೋಗುವ ಹೆಂಗಸರ ಜೊತೆಗೆ ಎಲ್ಲಿಲ್ಲದ ಅತಿಸಲಿಗೆ ತೋರುವುದು.

**7) ಸುಧಾರಣೆಗೆ ಸಕ್ರಿಯ ಆಸಕ್ತಿಯ ಕೊರತೆ:** ಪರಸಂಬಂಧ ಬಿಟ್ಟಮೇಲೆ ಸಂಗಾತಿಯ ಜೊತೆಗಿನ ಬಾಂಧವ್ಯವನ್ನು ಗಟ್ಟಿಗೊಳಿಸುವುದಕ್ಕೆ ಯತ್ನಿಸದೆ, ನೀರಸವಾಗಿ ನಡೆದುಕೊಳ್ಳುವುದು; ಸದಾ ಖಿನ್ನತೆಯನ್ನು ಅನುಭವಿಸುತ್ತ ಸಂಗಾತಿಗೆ ಸ್ಪಂದಿಸದೆ ಉದಾಸೀನರಾಗಿ ಇರುವುದು.

ಇದೆಲ್ಲ ತಪ್ಪಿತಸ್ಥ ಸಂಗಾತಿಯಲ್ಲಿ ಇರುವ ಕಾರಣಗಳಾಯಿತು. ಇನ್ನು, ಬಿಟ್ಟುಹೋಗದಿರುವುದಕ್ಕೆ ಕಾರಣಗಳು ನೊಂದ ಸಂಗಾತಿಯಲ್ಲೂ ಇರಬಹುದು. ಇದಕ್ಕೆ ದೃಷ್ಟಾಂತವಾಗಿ ಕರುಣಾ ನೆನಪಾಗುತ್ತಾಳೆ. (ನೋಡಿ: ನನಗೆ ಸಬಲೀಕರಣ ಬೇಕು: ಕಂತು 129–132) ಕರುಣಾಳ ಗಂಡ ಹಲವು ಹೆಂಗಸರೊಡನೆ ಸಂಬಂಧ ಇಟ್ಟುಕೊಂಡಿದ್ದು, ಅಮಾಯಕಳಾದ ಹೆಂಡತಿಯ ಜೊತೆಗೂ ಚೆನ್ನಾಗಿದ್ದ. ಕರುಣಾ ವಿದ್ಯೆಯ ಬಲದಿಂದ ಸ್ವಾವಲಂಬಿಯಾಗಿ ಗಂಡನನ್ನು ತೊರೆಯಲು ಸಾಧ್ಯವಿತ್ತು. ಹಾಗಿದ್ದರೂ ಆಕೆ ಮನಸ್ಸು ಮಾಡುತ್ತಿರಲಿಲ್ಲ. ಕಾರಣ ನಿಗೂಢವಾಗಿದ್ದು ಮನೋವಿಶ್ಲೇಷಣೆ ನಡೆಸುವಾಗ ಹೊರಬಂತು: ಸೋಮಾರಿತನ ಬಿಟ್ಟು ಸಕ್ರಿಯಳಾದರೆ ಕೆಲಸ ದೊರಕಿ ಗಂಡನಿಂದ ದೂರವಾಗಬೇಕಾಗುತ್ತದೆ. ಹಾಗೆಯೇ ಅಮಾಯಕತೆಯನ್ನು ಬಿಟ್ಟು ಬುದ್ಧಿವಂತಿಕೆ ತೋರುತ್ತ ಕ್ರಮ ಕೈಗೊಂಡರೆ ಗಂಡನ ಸುಖದಿಂದ ವಂಚಿತಳಾಗಬೇಕಾಗುತ್ತದೆ. ಹೆತ್ತವರಿಂದ ಚೂರೂ ಪ್ರೀತಿ ಸಿಗದವಳಿಗೆ ಇರುವ ಒಂದೇ ಒಂದು ಪ್ರೀತಿಯ ಸೆಲೆಯೆಂದರೆ ಗಂಡ ಮಾತ್ರ. ಅವನನ್ನೂ ದೂರಮಾಡಿಕೊಂಡರೆ ಬಾಳೆಲ್ಲ ಬರಡುತನ, ಒಂಟಿತನ ಕಟ್ಟಿಟ್ಟದ್ದು. ಹಾಗಾಗಿ ಆಕೆ ಒಂದುಕಡೆ ಗಂಡನಿಂದ ಪೂರೆ ಕಳಚಿಕೊಳ್ಳಬೇಕು ಎನ್ನುವಾಗಲೇ ಇನ್ನೊಂದು ಕಡೆ ಅದಕ್ಕೆ ಭದ್ರವಾಗಿ ಕಚ್ಚಿಕೊಳ್ಳುತ್ತ ನಿರ್ವಿಣ್ಣಳಾಗುತ್ತಿದ್ದಳು!

ಇನ್ನು ಕೆಲವರು ತಮ್ಮ ಸಂಗಾತಿಯ ಪರಸಂಬಂಧದ ಮೂಲಕ ಸ್ವಷ್ಟ ಅನುಕೂಲತೆಗಳನ್ನು ಪಡೆಯುವುದೂ ಉಂಟು. ಉದಾಹರಣೆಗಾಗಿ, ಒಬ್ಬ ಶಿಕ್ಷಕನು ತನ್ನ ಸಹೋದ್ಯೋಗಿ ಶಿಕ್ಷಕಿಯೊಡನೆ ಸಂಬಂಧ ಇಟ್ಟುಕೊಂಡ. ಆಗ ಹೆಂಡತಿ ಏನು ಮಾಡಿದಳು? ಪ್ರೇಮಿಯನ್ನು ಮದುವೆಯಾಗಲು ಗಂಡನನ್ನು ಒತ್ತಾಯಿಸಿದಳು. ಯಾಕೆ? ತೀರ ಕಡಿಮೆ ಕಲಿತ ಅವಳಿಗೆ ಮೂರು ಮಕ್ಕಳಿದ್ದು ಗಂಡನ ಸಂಪಾದನೆ ಸಾಲುತ್ತಿರಲಿಲ್ಲ. ಅಲ್ಲದೆ ಮೂವತ್ತು ದಾಟಿದ ಪ್ರೇಮಿಗೆ ಮಕ್ಕಳಾಗಲಿಕ್ಕಿಲ್ಲ ಎಂದು ಲೆಕ್ಕ ಹಾಕಿದ್ದಳು! ಕೆಲವು ಸಂದರ್ಭಗಳಲ್ಲಿ ಉದ್ದೇಶವು ಇಷ್ಟು ಸ್ಪಷ್ಟವಾಗಿ ಇರುವುದಿಲ್ಲ.ಉದಾಹರಣೆಗೆ, ಇಲ್ಲೊಬ್ಬಳು ಗಂಡನನ್ನು ಮನಃಪೂರ್ತಿ ಪ್ರೀತಿಸಲು ಹೆದರುತ್ತ ಅಂತರವನ್ನು ಕಾಪಾಡಿಕೊಂಡಿದ್ದಳು. ಯಾಕೆಂದರೆ ಹದಿನೆಂಟು ವರ್ಷದೊಳಗೆ ತಾನು ಪ್ರೀತಿಸುತ್ತಿದ್ದ ಮೂವರನ್ನು ಒಬ್ಬರಾದ ನಂತರ ಇನ್ನೊಬ್ಬರಂತೆ ಕಳೆದುಕೊಂಡಿದ್ದಳು. ಹಾಗಾಗಿ, ಪರಸಂಬಂಧದ ನೆಪದಿಂದ ಗಂಡನನ್ನು ದೂರವಿಡುವುದು ಸುಲಭವಾಯಿತು. ಪರಿಣಾಮವಾಗಿ ಗಂಡನು ಪರಸಂಬಂಧವನ್ನು ಕಡಿದುಕೊಳ್ಳಬೇಕೆಂದು ಯತ್ನಿಸುವಾಗ ಹೆಂಡತಿಯು ಅವನು ಪ್ರೇಮಿಗೆ ಹತ್ತಿರವಾಗುವಂಥ ಪ್ರಸಂಗಗಳನ್ನು ಸೃಷ್ಟಿಸುತ್ತಿದ್ದಳು!